ದಕ್ಷಿಣ ಕನ್ನಡ ಜಿಲ್ಲೆಯ ಶಾಲೆಗಳಲ್ಲಿ ಪಠ್ಯಪುಸ್ತಕಗಳನ್ನು ಒದಗಿಸುವ ಬಗ್ಗೆ

೧೪೦ (೪೬೮) ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಮಂಗಳೂರು).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಾಥಮಿಕ ಮತ್ತು ಪ್ರೌಢ ಪ್ರಾಥಮಿಕ ಶಾಲೆಗಳು ಎಷ್ಟಿವೆ ?

ಆ) ಸದರಿ ಶಾಲೆಗಳಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿ ವಿದ್ಯಾರ್ಥಿನಿಯರ ಸಂಖ್ಯೆ ಎಷ್ಟು ?

ಇ) ಇವರಲ್ಲಿ ಎಷ್ಟು ಮಂದಿಗೆ ಸರ್ಕಾರವು ಉಚಿತ ಪಠ್ಯಪುಸ್ತಕಗಳನ್ನು ಒದಗಿಸಿದೆ ?

ಈ) ಯಾವ ತರಗತಿಯ ಯಾವ ವಿಷಯದ ಪಠ್ಯಪುಸ್ತಕಗಳನ್ನು ಇನ್ನೂ ಒದಗಿಸಲಾಗಿಲ್ಲ ?

ಉ) ಈತನಕ ಒದಗಿಸಲಾಗದ ಪಠ್ಯಪುಸ್ತಕಗಳನ್ನು ಎಷ್ಟು ದಿವಸಗಳೊಳಗೆ ಸರ್ಕಾರದವರು ಒದಗಿಸುತ್ತಾರೆ ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಮಂತ್ರಿಗಳು).—

ಅ) ೧. ಪ್ರಾಥಮಿಕ ಶಾಲೆಗಳು ... ೧೪೧೦

೨. ಪ್ರೌಢ ಶಾಲೆಗಳು ... ೩೨೨

ಆ) ಒಟ್ಟು ವಿದ್ಯಾರ್ಥಿಗಳು :

೧. ಪ್ರಾಥಮಿಕ ಶಾಲೆಗಳಲ್ಲಿ ... ೪,೭೫,೮೪೭

೨. ಪ್ರೌಢ ಶಾಲೆಗಳಲ್ಲಿ ... ೬೧,೨೮೯

ಇ) ೪,೭೫,೦೬೦

ಈ) ಆಯಾ ಶಾಲೆಯ ಬೇಡಿಕೆಗಳ ಅನುಸಾರವಾಗಿ ಪಠ್ಯಪುಸ್ತಕಗಳನ್ನು ಒದಗಿಸಲಾಗಿದೆ.

ಉ) ಪ್ರಶ್ನೆ 'ಈ' ಗೆ ಕೊಟ್ಟಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಪರಿಷ್ಕೃತ ನಿವೃತ್ತ ವೇತನ ಮಂಜೂರಾತಿ ಬಗ್ಗೆ

೧೪೧ (೪೬೬) ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಮಂಗಳೂರು).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೯೮೫ನೇ ಸಾಲಿನ ಸರ್ಕಾರಿ ಆದೇಶದ ಮೇರೆಗೆ ಅನುದಾನ ಪಡೆಯುವ ಶಾಲೆಗಳ ನಿವೃತ್ತ ಅಧ್ಯಾಪಕರುಗಳಿಗೆ ಪಿಂಚಣಿಯನ್ನು ನೀಡಲಾಗುತ್ತಿದೆಯೇ ?

ಆ) ಹಾಗಿದ್ದಲ್ಲಿ ಎಷ್ಟು ಅಧ್ಯಾಪಕರುಗಳಿಗೆ ನೀಡಲಾಗಿದೆ ?

ಇ) ಪಿಂಚಣಿಯನ್ನು ಇನ್ನೂ ಪಡೆಯದೆ ಇರುವ ಅಧ್ಯಾಪಕರ ಸಂಖ್ಯೆ ಎಷ್ಟು ? ಹಾಗೂ ಇವರಿಗೆ ಪಿಂಚಣಿಯನ್ನು ಬೇಗನೆ ಮಂಜೂರು ಮಾಡಲು ಸರ್ಕಾರದವರ ಕ್ರಮವೇನು ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಮಂತ್ರಿಗಳು).—

ಅ) ಹೌದು.

ಆ) ೧೯೫ ನಿವೃತ್ತಿ ವೇತನದ ಪ್ರಕರಣಗಳನ್ನು ಪರಿಷ್ಕರಿಸಿ ಮಹಾಲೇಖಪಾಲರ ಮಂಜೂರಾತಿಗಾಗಿ ಕಳಿಸಿದೆ. ಒಂದು ಪ್ರಕರಣವು ಈಗಾಗಲೇ ಇತ್ಯರ್ಥವಾಗಿದೆ.

ಇ) ೩೫೪ ಪ್ರಕರಣಗಳು ಪರಿಷ್ಕರಣೆಗೆ ಬಂದಿವೆ. ಈ ಪ್ರಕರಣಗಳನ್ನು ಅದಷ್ಟು ಜಾಗ್ರತೆಯಾಗಿ ಇತ್ಯರ್ಥ ಮಾಡಲು ಶೀಘ್ರ ಕ್ರಮ ಕೈಗೊಳ್ಳಲಾಗುವುದು.